**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು–560012.

ಸಂಖ್ಯೆ:ಪಪೂಶಿಇ/ಪರೀಕ್ಷೆ/ವಿ.ಹಾಜರಾತಿ–01/2017-18 ದಿನಾಂಕ:27.10.2017.

**ಸುತ್ತೋಲೆ**

ವಿಷಯ: ಪ್ರಥಮ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಹಾಜರಾತಿ ಬಗ್ಗೆ.

ಉಲ್ಲೇಖ:
1. ದಾಖಲಾತಿ ಮಾರ್ಗಸೂಚಿ 2017–18 ಹಾಗೂ ಪರೀಕ್ಷಾ ಸುತ್ತೋಲೆ
2. W/P Nos 10276/2017,10625/2017,6500/2017, 11551/2017, 6545/2017, W/P Nos 22655-22664 EDN/EX/2017 W/A 5587-5592/2017 Etc.

* * * *

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ 1ಕ್ಕೆ ಸಂಬಂಧಿಸಿದಂತೆ ಕರ್ನಾಟಕದ ಪದವಿ ಪೂರ್ವ ಶಿಕ್ಷಣ (ಶೈಕಣಿಕ, ನೋಂದಣಿ, ಆಡಳಿತ ಮತ್ತು ಅನುದಾನಿತ ಇತ್ಯಾದಿ) ನಿಯಮಗಳು 2006 ರ ಉಪ ನಿಯಮ 12(1) ರನ್ವಯ ಪ್ರತಿ ವಿಷಯದಲ್ಲಿ ಕನಿಷ್ಠ ಶೇಕಡಾ 75 ಹಾಜರಾತಿಯನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು, ಅಂತಹ ವಿದ್ಯಾರ್ಥಿಯು ಮಾತ್ರ ಪ್ರಥಮ ಮತ್ತು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಹಾಜರಾಗಲು ಅರ್ಹರಾಗಿರುತ್ತಾರೆ.

ಹಾಜರಾತಿ ನಿಯಮದನ್ವಯ ಒಂದು ಶೈಕ್ಷಣಿಕ ಅವಧಿಯನ್ನು ದಾಖಲಾತಿಯ ಶೈಕ್ಷಣಿಕ ವರ್ಷದ ಆರಂಭದ ದಿನದಿಂದ ವಾರ್ಷಿಕ (ಪ್ರಥಮ ಹಾಗೂ ದ್ವಿತೀಯ ಪಿಯುಸಿ) ಪರೀಕ್ಷೆಗಳ ಹಿಂದಿನ ದಿನಾಂಕದವರೆಗೆ ವಿದ್ಯಾರ್ಥಿಗಳ ಹಾಜರಾತಿಯನ್ನು ಪರಿಗಣಿಸಬೇಕಾಗಿದೆ.

ಈ ಅವಧಿಯಲ್ಲಿನ ಹಾಜರಾತಿಯ ಲೆಕ್ಕಚಾರವನ್ನು ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ತಿಳಿಸುವ ಸಲುವಾಗಿ ಈ ಕೆಳಗಿನಂತೆ ವೇಳಾಪಟ್ಟಿಯನ್ನು ನಿಗಧಿಪಡಿಸಿದೆ.

**ವಿಶೇಷ ಸೂಚನೆ:** ಹಾಜರಾತಿ ಕೊರತೆಯನ್ನು ವಿದ್ಯಾರ್ಥಿಗಳಿಗೆ ಹಾಗೂ ಪೋಷಕರಿಗೆ ದಿನಾಂಕ: 15.09.2017, 30.11.2017, 31.12.2017, 31.01.2018 ರ ದಿನಾಂಕಗಳಂದು ಪೋಷಕರ ಸಭೆಯನ್ನು ಕರೆದು ಖುದ್ದಾಗಿ ತಿಳಿಸಿ ಅವರಿಂದ ದೃಢೀಕರಣವನ್ನು ಪಡೆಯುವುದು. ದಿನಾಂಕ: 31.12.2017 ರಂದು ಪ್ರಕಟಿಸುವ ಹಾಜರಾತಿ ಕೊರತೆಯ ಮಾಹಿತಿಯನ್ನು ವಿದ್ಯಾರ್ಥಿಗಳ ಪೋಷಕರಿಗೆ ನೋಂದಾಯಿತ ಅಂಚೆಯ ಮೂಲಕ ಕಳುಹಿಸಿ ಸ್ವೀಕೃತಿಯನ್ನು ಪಡೆಯುವುದು ಹಾಗೂ ಹಾಜರಾತಿ ಕೊರತೆ ಇರುವ ವಿದ್ಯಾರ್ಥಿಗಳ ಪಟ್ಟಿಯನ್ನು ಜಿಲ್ಲಾ ಉಪನಿರ್ದೇಶಕರ ದೃಢೀಕರಣದೊಂದಿಗೆ ಸಹಾಯಕ ನಿರ್ದೇಶಕರು (ಪರೀಕ್ಷಾ ಶಾಖೆ), ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ 18ನೇ ಕ್ರಾಸ್ ಇವರಿಗೆ ಕಡ್ಡಾಯವಾಗಿ 2018 ಜನವರಿ ತಿಂಗಳ ಮೊದಲನೇ ವಾರದಲ್ಲಿ ಕಳುಹಿಸಿಕೊಡುವುದು.

ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಯಲ್ಲಿ ಉತ್ತೀರ್ಣರಾದ, ಪ್ರಥಮ ಪಿಯುಸಿಗೆ ದಾಖಲಾದ ವಿದ್ಯಾರ್ಥಿಗಳಿಗೆ ದಾಖಲಾದ ದಿನಾಂಕದಿಂದ ಹಾಜರಾತಿ ನೀಡಲು ಸೂಚಿಸಿದೆ.

ನಿಮಗೆ ಕಳುಹಿಸಲಾಗುವ ಪ್ರವೇಶ ಪತ್ರಗಳಲ್ಲಿ ಹಾಜರಾತಿ ಕೊರತೆ (Shortage of attendance) ಇರುವಂತಹ ಪ್ರವೇಶ ಪತ್ರಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಬಾರದು. ಅಂತಹ ಮೂಲ ಪ್ರವೇಶ ಪತ್ರಗಳ ಮೇಲೆ "SAT" ಎಂದು ನಮೂದಿಸಿ ಪಟ್ಟಿ ಮಾಡಿ ತುರ್ತಾಗಿ ಸಹಾಯಕ ನಿರ್ದೇಶಕರು (ಪರೀಕ್ಷೆ) ಪದವಿ ಪೂರ್ವ ಶಿಕ್ಷಣ ಇಲಾಖೆ ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560012. ಇವರ ವಿಳಾಸಕ್ಕೆ ಹಿಂದಿರುಗಿಸುವುದು. ***ಹಾಜರಾತಿ ಕೊರತೆ ಇರುವ ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರಗಳನ್ನು ವಿತರಿಸಿದಲ್ಲಿ ಅಥವಾ ಅವುಗಳನ್ನು ಕಾಲೇಜಿನಲ್ಲಿ ಉಳಿಸಿಕೊಂಡಲ್ಲಿ ಮುಂದೆ ಸಂಭವಿಸಬಹುದಾದ ಆಗುಹೋಗುಗಳಿಗೆ ಪ್ರಾಂಶುಪಾಲರೇ ಸಂಪೂರ್ಣ ಜವಾಬ್ದಾರರಾಗುತ್ತಾರೆ.***

**ಹಾಜರಾತಿ ಕೊರತೆಯಿಂದ ವಾರ್ಷಿಕ ಪರೀಕ್ಷೆಗೆ ಹಾಜರಾಗಲು ಸಾಧ್ಯವಾಗದ ವಿದ್ಯಾರ್ಥಿಗಳಿಗೆ ಪೂರಕ ಪರೀಕ್ಷೆಗೆ ಹಾಜರಾಗಲು ಅವಕಾಶವಿರುವುದಿಲ್ಲ.** ಅಂತಹ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿಗೆ ಮರು ದಾಖಲಾತಿ ಪಡೆಯಬಹುದಾಗಿದೆ.

ಉಲ್ಲೇಖ 2ಕ್ಕೆ ಸಂಬಂಧಿಸಿದಂತೆ ಕೆಲವು ಕಾಲೇಜುಗಳಲ್ಲಿ ಹಾಜರಾತಿ ಕೊರತೆಯಿರುವ ವಿದ್ಯಾರ್ಥಿ/ ಪೋಷಕರಿಗೆ ಸಕಾಲಿಕವಾಗಿ ತಿಳಿಸುವಲ್ಲಿ ಸೂಕ್ತ ಕ್ರಮವಹಿಸದೆ ವರ್ಷಾಂತ್ಯಕ್ಕೆ ಸಮಸ್ಯೆಗಳ ಪರಿಹಾರಕ್ಕೆ ಇಲಾಖೆಯನ್ನು ಕೋರುವುದು. ನಿಯಮಬಾಹಿರವಾಗಿ ದಂಡ ವಸೂಲು ಮಾಡುವುದು. ಕೆಲವು ವಿದ್ಯಾರ್ಥಿಗಳನ್ನು ಗುರಿಯಾಗಿಟ್ಟುಕೊಂಡು ಪ್ರವೇಶಪತ್ರವನ್ನು ಸಕಾಲದಲ್ಲಿ ಇಲಾಖೆಗೆ ಸಲ್ಲಿಸದೆ ತಡೆಹಿಡಿಯುವುದು ಇತ್ಯಾದಿ ಕ್ರಮಗಳು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಇಂತಹ ಕೆಲವು ಸಂದರ್ಭಗಳಲ್ಲಿ ವಿದ್ಯಾರ್ಥಿಗಳು ಹಾಗೂ ಪೋಷಕರು ಉಚ್ಚನ್ಯಾಯಾಲಾಯದಲ್ಲಿ ಪ್ರಕರಣ ದಾಖಲಿಸಿ ಸದರಿ ಹಾಜರಾತಿ ನಿಯಮಕ್ಕೆ ವ್ಯತಿರಿಕ್ತ ಆದೇಶವನ್ನು ಪಡೆದು ಪರೀಕ್ಷೆಗೆ ಹಾಜರಾಗಿರುವ ಸಂದರ್ಭಗಳು ಎದುರಾಗಿವೆ. ಕೆಲವು ಬಾರಿ ನ್ಯಾಯಾಲಾಯದ ಆದೇಶದಂತೆ ಫಲಿತಾಂಶವನ್ನು ಇಲಾಖೆ ಪ್ರಕಟಿಸಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಇಲಾಖೆಯು ತೀವ್ರತರವಾದ ಮುಜುಗರಕ್ಕೆ ಹಾಗೂ ವಿದ್ಯಾರ್ಥಿಗಳ / ಪೋಷಕರ ಆಕ್ರೋಶಕ್ಕೆ ಗುರಿಯಾಗಬೇಕಾಗುತ್ತದೆ.

ಈ ಹಿನ್ನಲೆಯಲ್ಲಿ ರಾಜ್ಯದ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರು ಹಾಜರಾತಿ ನಿಯಮವನ್ನು ಹಾಗು ಇತರ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಿದೆ.

27/10

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ